


### ಕಣ್ಣು ತೆರೆಸಿದ ಲೇಖನ

'ಟ್ಯೂಷನ್ ಇಲ್ಲದೆ ಭವಿಷ್ಯ ಇಲ್ಲವೆ?' ಯಾಜ್ಞವಲ್ಕ್ಯರ ಮುಖಪುಟ ಲೇಖನ ಹೆತ್ತವರ ಹಾಗೂ ವಿದ್ಯಾರ್ಥಿಗಳ ಕಣ್ಣು ತೆರೆಸುವಂತಿದೆ.

ಶಿವರಾಂ ಕಲ್ಮೋಡಿ, ಶ್ರೀರಾಮೇಶ್ವರ

### ಹೆತ್ತವರಿಗೆ ಸಲಹೆ ಅಗತ್ಯ

ಯಾಜ್ಞವಲ್ಕ್ಯ ಪ್ರಸ್ತಾಪಿಸಿರುವಂತೆ ಭದ್ರಾವತಿಯಲ್ಲಿ ಎಲ್.ಐ.ಸಿ. ಉದ್ಯೋಗಿ ಬಿ.ಎಸ್. ಗೋಪಾಲ ಕೃಷ್ಣಮೂರ್ತಿ (ಜಿ.ಕೆ. ಸರ್) ನಡೆಸುತ್ತಿರುವ ಫ್ರೀ ಟ್ಯೂಷನ್ 'ಡಿ.ಸಿ.' (ಡಿಸ್ಕಷನ್ ಕ್ಲಾಸ್) ಸತತ 38 ವರ್ಷಗಳಿಂದಲೂ ನಡೆಯುತ್ತಿದೆ. ಇಲ್ಲಿ ವಿದ್ಯಾರ್ಥಿಗಳಿಗೆ –ವಿದ್ಯಾರ್ಥಿಗಳೇ ಕಲಿಸುತ್ತಾರೆ! ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ಪೋಷಕರಿಗೆ ಆಪ್ತಸಲಹೆ ಅಗತ್ಯವಿದೆ ಎಂದು ಜಿ.ಕೆ. ಸರ್ ಹೇಳುತ್ತಾರೆ. ವಿದ್ಯಾರ್ಥಿಗಳು, ಪೋಷಕರ ಕರೆಗೆ ಜಿ.ಕೆ. ಸರ್ ಲಭ್ಯ. ಅವರ ಫೋನ್ ನಂ. 9448200262

–ವಿ. ಶ್ರೀನಿವಾಸ, ಶಿವಮೊಗ್ಗ

### ರಿಯಲಿ ಬಿಗ್!

'ಬಿಗ್ ಬ್ರದರ್ಸ್' ಕ್ರಿಕೆಟ್‌ನ ಪಠಾಣ್ ಸಹೋದರರ ಸಾಧನೆಗಳ ಕುರಿತು ಕೆ. ಓಂಕಾರಮೂರ್ತಿ ಚೆನ್ನಾಗಿ ತಿಳಿಸಿದ್ದಾರೆ.

–ಪಿ.ಎಸ್. ನಾರಾಯಣ ಭಟ್, ತೋಟ, ಪುತ್ತೂರು/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ

### ಇಬ್ಬಂದಿತನ ಬೇಡ

'ನಮ್ಮ ಮೆದುಳಿಗೆ ನಮ್ಮದೇ ಸಾಫ್ಟ್‌ವೇರ್' ನಡಹಳ್ಳಿ ವಸಂತ್ ಲೇಖನ ನಿಜಕ್ಕೂ ಕಣ್ತೆರೆಸುವಂತಿದೆ.

–ತರಂಗಿಣಿ, ತುಮಕೂರು/ ಎಚ್.ಆನಂದಕುಮಾರ್, ಚಿತ್ರದುರ್ಗ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

### ಪವಿತ್ರ ಶಿಲುಬೆ ಗುಡ್ಡ

ಯಾವುದೇ ವಸಾಹತುಶಾಹಿ ಆಡಳಿತಕ್ಕೆ ಶರಣಾಗದ ಲಿಥುವೇನಿಯಾದ ನಾಗರಿಕರು ಶಿಲುಬೆ ಗುಡ್ಡವನ್ನು ದೇವ ಸನ್ನಿಧಿಯ ಪವಿತ್ರ ಸ್ಥಳವಾಗಿಸಿರುವುದನ್ನು ಎಫ್. ಎಂ.ನಂದಗಾಂವ್ ಪರಿಚಯಿಸಿದ್ದಾರೆ. ಇದು ವಿಶ್ವದ ಭಕ್ತರನ್ನು ಆಕರ್ಷಿಸುತ್ತಿರುವುದು ಸ್ತುತ್ಯಾರ್ಹ.

–ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಕಾಶಿಯಲ್ಲಿ ಕನ್ನಡ ಪೀಠ!

'ಬನಾರಸ್ಸಿನ ಸಂಕರಲೋಕ'ವನ್ನು ರಹಮತ್ ತರೀಕೆರೆ ವಸ್ತುನಿಷ್ಠವಾಗಿ ಪರಿಚಯಿಸಿದ್ದಾರೆ. ಇದೊಂದು ಉತ್ತಮ ವಿಶ್ಲೇಷಣೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿದ್ದು ಕನ್ನಡ ಪೀಠ ಈಗ ನಿಷ್ಕ್ರಿಯವಾಗಿರುವುದು ವಿಷಾದದ ಸಂಗತಿ. ಆ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ. ಶ್ರೀಮಾಲಿ ಅವರ ಪ್ರಯತ್ನದಿಂದಾಗಿ ಕನ್ನಡ ಪೀಠ ಸ್ಥಾಪನೆಗೊಂಡಿತು. ಡಾ.ಪ್ರಭುಶಂಕರ ಅವರು ಪೀಠದ ಪ್ರಥಮ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಈಗ ಪೀಠ ತೆರವಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಬಗ್ಗೆ ಗಮನಿಸಿ, ಕನ್ನಡ ಪೀಠದ ಮೂಲಕ ಹೊರನಾಡಿನಲ್ಲಿ ಕನ್ನಡದ ಕೆಲಸಗಳು ನಡೆಯುವಂತೆ ನೋಡಿಕೊಳ್ಳಬೇಕು.

–ಎಸ್. ಚನ್ನಪ್ಪ, ಮೈಸೂರು/ ಡಿ.ಎಲ್.ನಾಗರಾಜ್, ಚನ್ನಗಿರಿ

### ಕುರ್ಚಿ ಪಾತ್ರವಾದ ಕಥೆ

ವಿವೇಕಾನಂದ ಕಾಮತ್‌ರ 'ವಾಂಛೆ' ಕಥೆಯಲ್ಲಿ ತಲೆಮಾರುಗಳ ನಡುವಿನ ಅಂತರ ಚೆನ್ನಾಗಿ ಬಿಂಬಿತವಾಗಿದೆ. ಕುರ್ಚಿಯೊಂದನ್ನು ಪಾತ್ರವಾಗಿ ಬಳಸಿಕೊಂಡ ಶೈಲಿ ಗಮನಾರ್ಹ.

ಪ್ರಭುಪ್ರಸಾದ್ ನಡುತೋಟ, ಶೃಂಗೇರಿ/ ಜಿ.ವಿಶ್ವನಾಥ, ಗೊಂಡೇದಹಳ್ಳಿ

### ತಲೆಕೆಳಗಾದ ಚಿತ್ರ

ನಿಮ್ಮ ಪುಟದ 'ರೈತ ಸ್ನೇಹಿ ಈ ದೋಟಿ' ಚಿತ್ರ ಬರಹದಲ್ಲಿ ಚಿತ್ರ ತಲೆ ಕೆಳಗಾಗಿದೆ.

–ಅನಂತ ಎಂ. ತಾಮಂಕರ, ದಾವಣಗೆರೆ




### ಎಲ್ಲ ಹಿಡಿಸಿತು, ಆದರೆ...!

'ಯುಗಾದಿ ವಿಶೇಷಾಂಕದ 2012 ಸುಧಾ'ದಲ್ಲಿ ಲೇಖನಗಳು, ಕವನಗಳು, ವ್ಯಂಗ್ಯಚಿತ್ರಗಳು, ಓದುಗರ ವೇದಿಕೆ, ಕಥಾಲೋಕ, ಹಾಸ್ಯ, ಮಕ್ಕಳಿಗೆ ಪದ್ಯಗಳು ಓದಿ ಆನಂದಪಟ್ಟೆ.

ಲಲಿತ ಪ್ರಬಂಧ ವಿಭಾಗದಲ್ಲಿ ವಿಮರ್ಶಕರು ಹೇಳಿದ ಮಾತು ಸತ್ಯವಾದರೂ ಬಹುಮಾನಿತ ಪ್ರಬಂಧಗಳು ಕಟ್‌ಪೀಸ್ ಆಗಿ ಕಂಡವು!

–ಬಿ.ಎನ್. ಸೊಲ್ಲಾಪುರೆ, ಕಮಲನಗರ

### ಸುಂದರ ಮುಖಪುಟ ವಿನ್ಯಾಸ

'ಸುಧಾ' 2012ರ ಯುಗಾದಿ ವಿಶೇಷಾಂಕ ಮುಖಪುಟ ಮತ್ತು ಸಂಚಿಕೆ ವಿನ್ಯಾಸ ಚೆನ್ನಾಗಿ ಬಂದಿದೆ. ನಾಗವೇಣಿ ಅವರ 'ವಂಗನಾಡಿನ ನೆನಪುಗಳು' ಓದುವಾಗ ಲೇಖಕಿ ಜತೆ ನಾವು ಓಡಾಡಿದ ಹಾಗಾಯಿತು.

–ವಿ.ಆರ್. ಮಾಳೇಕೊಪ್ಪಮಠ, ಗದಗ

### ಸಮಗ್ರ ಸಂಚಿಕೆ

ಯುಗಾದಿ ವಿಶೇಷಾಂಕದ ವಿನ್ಯಾಸ ಗಮನ ಸೆಳೆಯಿತು. ಸೌಂದರ್ಯ, ಸಿನಿಮಾ ಸೇರಿದಂತೆ ಮಹಿಳೆಗೆ ಬೇಕಾದ ಎಲ್ಲ ಐಟಂಗಳು ಇದ್ದವು. ಸಾಮಾನ್ಯವಾಗಿ ವಿಶೇಷಾಂಕಗಳು ಮಕ್ಕಳ ಸಾಹಿತ್ಯವನ್ನು ಅಲಕ್ಷಿಸುತ್ತವೆ. ಆದರೆ ಸೊಗಸಾದ ಮಕ್ಕಳ ಪದ್ಯ ಪ್ರಕಟಿಸಿ ಸಮಗ್ರ ಸಂಗ್ರಹಯೋಗ್ಯ ಸಂಚಿಕೆಯಾಗಿ ಮಾಡಿದ್ದೀರಿ.

–ರೇಣುಕಾ ಪಾಟೀಲ, ದಾವಣಗೆರೆ

## ನಕ್ಕುಬಿಡಿ



### ಬರುವವರಿದ್ದೇವೆ

ವ್ಯಕ್ತಿ: ನಿಮ್ಮ ಮನೆಯಲ್ಲಿ ಕುರ್ಚಿ, ಟೇಬಲ್, ಫ್ಯಾನ್ ಇತ್ಯಾದಿ ವಸ್ತುಗಳು ಇವೆಯೇ?

ತಾಯಿ: ಇವೆ

ವ್ಯಕ್ತಿ: ಇಸ್ತ್ರಿಪೆಟ್ಟಿಗೆ, ಫೋನ್, ಮಿಕ್ಸರ್ ಕೂಡ ಇರಬೇಕಲ್ಲವೇ?

ತಾಯಿ: ಇವೆ ಎಲ್ಲಾ ಇವೆ

ವ್ಯಕ್ತಿ: ದಿನಪತ್ರಿಕೆ ತೆಗೆದು ಕೊಳ್ಳುವಿರಾ?

ತಾಯಿ: ಹೌದು, ತೆಗೆದು ಕೊಳ್ಳುತ್ತೇವೆ. ಅದಿರಲಿ ಇದನ್ನೆಲ್ಲಾ ಯಾಕೆ ಕೇಳುತ್ತಿದ್ದೀರಿ?

ವ್ಯಕ್ತಿ: ನಾವು ನಿಮ್ಮ ಪಕ್ಕದ ಮನೆಯಲ್ಲಿ ಬಾಡಿಗೆ ಇರಲು ಬರಬೇಕು ಎಂದಿದ್ದೇವೆ.

★★★

### ಸವಿಮಾತು

ಪತ್ನಿ: ನಾನು ತವರು ಮನೆಗೆ ಹೋಗುತ್ತಿದ್ದೇನೆ. ಅಲ್ಲಿಂದ ನಾನು ನಿಮಗೆ ವಿವಾಹ ವಿಚ್ಛೇದನದ ನೋಟೀಸ್ ಕಳುಹಿಸುತ್ತೇನೆ.

ಪತಿ: ಹೋಗು.. ಹೋಗು.. ಇಂಥ ಸವಿಮಾತು ಹೇಳಿ ನನ್ನನ್ನು ಸಂತುಷ್ಟಗೊಳಿಸುವ ಪ್ರಯತ್ನ ಮಾಡಬೇಡ

ಸಂಗ್ರಹ: ಎ.ಎ.ಸನದಿ ಶಿಂದೊಳ್ಳಿ



### ಕಂಪ್ಯೂಟರ್ ಸೈನ್ಸ್

ಪ್ರೊಫೆಸರ್: 'ಗ್ರೇಟ್ ಟೈಮ್ ಸೇವರ್'ಗೆ ಯಾರಾದರೂ ಒಂದು ಎಕ್ಸಾಂಪಲ್ ಕೊಡಿ

ಗುಂಡ: ಲವ್ ಅಟ್ ಫಸ್ಟ್ ಸೈಟ್, ಸರ್.

★★★

ಲಾಜಿಕ್ ಪ್ರೊಫೆಸರ್: ಪ್ರತಿಯೊಂದು ಪ್ರಶ್ನೆಗೂ 'ಎಸ್' ಆರ್ 'ನೋ' ಎಂದು ಉತ್ತರಿಸಬಹುದು. ಇದಕ್ಕೆ ಹೊರತಾದ ಯಾವುದಾದರೂ ಪ್ರಶ್ನೆಯಿದ್ದರೆ ಯಾರಾದರೂ ಕೇಳಬಹುದು.

ಗುಂಡ: ನಿಮ್ಮ ಹೆಂಡತಿಯನ್ನು ಈಗಲೂ ನೀವು ಹೊಡಿತಿದ್ದೀರಾ ಸರ್?

ಸಂಗ್ರಹ: ಕೆ.ಜಯಮ್ಮ